ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,

ಶ್ರೀನಿವಾಸಪುರ

ಸಿ.ಸಿ.ನಂ:382/2018

| | | | | |
|---|---|---|---|---|
| 01 | ಹೆಸರು | ರಮೇಶ್ ಬಾಬು ಜಿ.ಆರ್. | **CW** | **PW** |
| 02 | ತಂದೆಯ ಹೆಸರು | ರಾಮಸುಬ್ಬು | 9 | 4 |
| 03 | ವಯಸ್ಸು | 45 ವರ್ಷ | ಪ್ರಮಾಣೀಕರಿಸಲಾದ ದಿನಾಂಕ | |
| 04 | ಉದ್ಯೋಗ | ಹೆಚ್.ಸಿ.**184** | 20.12.2024 | |
| 05 | ಊರು | ಶ್ರೀನಿವಾಸಪುರ | | |

**ಮುಖ್ಯ ವಿಚಾರಣೆ:** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 2015 ರಿಂದ 2022 ರ ವರೆವಿಗೂ ಗೌನಿಪಲ್ಲಿ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ: 31.08.2018 ಪಂಚನಾಮೆ ಬರೆಯಲು ಸಹಾಯ ಮಾಡಲು ಚಾಸಾ.10 ನೇ ದವರು ನನ್ನನ್ನು ಅವರೊಂದಿಗೆ ಕರೆದುಕೊಂಡು ಹೋಗಿದ್ದು, ಅದರಂತೆ ಅವರ ಉಕ್ತಲೇಖನದಂತೆ ನಾನು ಮಹಜರನ್ನು ಬರೆದಿರುತ್ತೇನೆ. ಸಾಕ್ಷಿಯು ತಾನು ಬರೆದ ಸದರಿ ಮನಹರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಚಾಸಾ.10 ನೇದವರು ಕಬ್ಬಿಣದ ಒಂದು ಪ್ಯಾನೆಲ್ ಬೋರ್ಡ್ ಬಾಕ್ಸ್ ನ್ನು ಅಮಾನತ್ತು ಪಡೆಸಿಕೊಂಡಿರುತ್ತಾರೆ. ಅದನ್ನು ನೋಡಿ ಸಾಕ್ಷಿಯು ಗುರುತಿಸಿದ್ದು , ಸದರಿ ಪ್ಯಾನೆಲ್ ಬೋರ್ಡ್ ಬಾಕ್ಸ್ ನ್ ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ.ಟಿ.ವಿ.ಎಸ್., ವಕೀಲರಿಂದ:**

ನಿಪಿ.2 ರಲ್ಲಿರುವ ವಿಚಾರಗಳನ್ನು ನನಗೆ ಖುದ್ದಾಗಿ ಹೇಳಲು ನನಗೆ ಈಗ ಬರುವುದಿಲ್ಲ. ನಿಪಿ.2 ಕ್ಕೆ ಚಾಸಾ.10 ನೇ ದವರು ಸ್ಥಳದಲ್ಲೇ ಉಕ್ತಲೇಖನ ಕೊಟ್ಟಿರುತ್ತಾರೆ. ನಿಪಿ.2 ನ್ನು ನಾವು

ಠಾಣೆಯಲ್ಲಿ ತಾಯಾರಿಸಿರುತ್ತೇವೆ, ಸ್ಥಳಕ್ಕೆ ನಾವು ಹೋಗೇ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಮಹಜರನ್ನು ಬರೆಯುವಾಗ ಚಾಸಾ.6 ರಿಂದ 8 ನೇ ದವರು ಉಪಸ್ಥಿತರಿದ್ದರು. ಅವರುಗಳ ತಂದೆಯ ಹೆಸರುಗಳು ನನಗೆ ಹೇಳಲಾಗುವುದಿಲ್ಲ. ಚಾಸಾ.6 ರಿಂದ 8 ನೇ ದವರು ಆ ದಿನ ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ನಾವು ಆ ದಿನ ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ನೇ ದವರ ಸುಳ್ಳು ದೂರಿಗೆ ಚಾಸಾ.10 ನೇ ದವರು ಹಾಕಿರುವ ಸುಳ್ಳು ದೋಷಾರೋಪಣೆ ಪಟ್ಟಿಗೆ ಪೂರಕವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ